ಎಪಿಎಲ್ ಕುಟುಂಬಗಳ ವ್ಯತ್ಯಾಸದಲ್ಲಿರುವ ಮಾರ್ಜಿನಲ್ ಕುಟುಂಬಗಳನ್ನು ಇಬಿಪಿಎಲ್ ಎಂದು ಗಣನೆಗೆ ತೆಗೆದುಕೊಂಡು ಹಂಚಿಕೆಯಲ್ಲಿ ಆ ಕುಟುಂಬವನ್ನು ಸೇರಿಸಿ ಅವರಿಗೆ ಎಪಿಎಲ್ ನಿಂದ ಆಹಾರಧಾನ್ಯವನ್ನು ವರ್ಗಾವಣೆ ಮಾಡಿಕೊಂಡು ಬಿಪಿಎಲ್ ದರದಲ್ಲಿ ವಿತರಿಸಲಾಗುತ್ತಿದೆ.

ಆದ್ದರಿಂದ ರಾಜ್ಯದ ಬಹುತೇಕ Marginally Above BPL (ಕೇಂದ್ರ ಸರ್ಕಾರದ ಪ್ರಕಾರ) ಎಪಿಎಲ್ ಕಾರ್ಡ್‌ದಾರರು ಬಿಪಿಎಲ್ ವರ್ಗದಲ್ಲಿ ಆಹಾರಧಾನ್ಯ ಪಡೆಯುತ್ತಿರುತ್ತಾರೆ.

ವಾಣಿ ವಿಲಾಸ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

486(302); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರಿನ ವಾಣಿವಿಲಾಸ್ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿರುವ ಹಾಸಿಗೆ ಸಂಖ್ಯೆ ಎಷ್ಟು;

ಆ) ಇಲ್ಲಿ ಪ್ರತಿ ತಿಂಗಳು ದಾಖಲಾಗುವ ರೋಗಿಗಳ ಸಂಖ್ಯೆ ಎಷ್ಟು;

ಇ) ಈ ಆಸ್ಪತ್ರೆಯಲ್ಲಿ ಒದಗಿಸಿರುವ ಉಪಕರಣಗಳು ಹಾಗೂ ಇತರೆ ಸೌಕರ್ಯಗಳು ಯಾವವು;

ಈ) ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಶರಣಪ್ರಕಾಶ್ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು).

ಅ) ಬೆಂಗಳೂರಿನ ವಾಣಿವಿಲಾಸ್ ಆಸ್ಪತ್ರೆಯು 536 ಹಾಸಿಗೆಗಳ ಸಾಮರ್ಥ್ಯ ದಾಗಿದ್ದು, ಆದರೆ 98 ಹಾಸಿಗೆಗಳ ಮಕ್ಕಳ ವಾರ್ಡ್‌ನ್ನು ಮೆಟ್ರೋ ಕಾಮಗಾರಿಯಿಂದ ಮುಚ್ಚಲಾಗಿದ್ದು, ಪಸ್ತುತ 438 ಹಾಸಿಗೆಗಳ ಸಾಮರ್ಥ್ಯ ಹೊಂದಿರುತ್ತದೆ.

ಆ) ವಾಣಿವಿಲಾಸ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸರಾಸರಿ 3000 ರೋಗಿಗಳು ದಾಖಲಾಗಿದ್ದು, 2012 ಮತ್ತು 2013ನೇ ಸಾಲಿಗೆ ತಿಂಗಳುವಾರು ದಾಖಲಾಗಿರುವ ರೋಗಿಗಳ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಈ ಆಸ್ಪತ್ರೆಯಲ್ಲಿ ಒದಗಿಸಿರುವ ಉಪಕರಣಗಳು ಹಾಗೂ ಇತರ ಸೌಕರ್ಯಗಳ ವಿವರಗಳನ್ನು ಅನುಬಂಧ–2 ಮತ್ತು 3ರಲ್ಲಿ ನೀಡಲಾಗಿದೆ.

ಈ) ವಾಣಿ ವಿಲಾಸ ಆಸ್ಪತ್ರೆಯ ಮುಂಭಾಗದ ಸ್ಥಳವನ್ನು ಮೆಟ್ರೋ ಕಾಮಗಾರಿಗಾಗಿ ನೀಡಿದ್ದು, ಇದಕ್ಕೆ ಪರಿಹಾರವಾಗಿ ಮೆಟ್ರೋ ಸಂಸ್ಥೆಯ ವತಿಯಿಂದ High Risk Pregnancy Block ಕಟ್ಟಡವನ್ನು ನಿರ್ಮಿಸಲು ₹ 13.00 ಕೋಟಿ ನೀಡಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಘನ ಸರ್ಕಾರವು ಹೆಚ್ಚುವರಿಯಾಗಿ ₹ 17.00 ಕೋಟಿ ಹಣವನ್ನು ನೀಡಿದ್ದು, ಒಟ್ಟು ₹ 30.00 ಕೋಟಿ ವೆಚ್ಚದಲ್ಲಿ High Risk Pregnancy Block ಕಟ್ಟಡವನ್ನು ನಿರ್ಮಿಸಲು ಯೋಜನೆ ಕೈಗೊಂಡಿದ್ದು, ಕಾಮಗಾರಿ ಪ್ರಾರಂಭವಾಗಬೇಕಾಗಿರುತ್ತದೆ. ಇದು 5 ಅಂತಸ್ತಿನ ಕಟ್ಟಡವಾಗಿರುತ್ತದೆ ಇದು 106 ಹಾಸಿಗೆ ಸಾಮರ್ಥ್ಯವನ್ನು ಹೊಂದಿದ್ದು, ಜೊತೆಗೆ ಪ್ರತ್ಯೇಕ ಪೀಡಿಯಾಟ್ರಿಕ್ ವಾರ್ಡ್ ಹಾಗೂ 02 ಐ.ಸಿ.ಯು.ಗಳು (ಎನ್.ಐ.ಸಿ.ಯು. & ಪಿ.ಐ.ಸಿ.ಯು); ಸೆಂಟ್ರಲ್ ಸ್ಟೆರಿಲೈಜೇಷನ್ ಮತ್ತು ಸಪ್ಲೈ ವಿಭಾಗಗಳು, ಓ.ಬಿ.ಜಿ.ಗೆ 02 ಐ.ಸಿ.ಯು 02 ಮಾಡ್ಯುಲರ್ ಓ.ಟಿ. ಹಾಗೂ ಲೇಬರ್ ವಾರ್ಡ್‌ಗಳನ್ನು ಹೊಂದಿರುತ್ತದೆ

ಅನುಬಂಧ–1

VANIVILAS HOSPITAL STATISTICS FOR THE YEAR OF 2012

SL NO	Particulars	JAN	FEB	MAR	APR	MAY	JUN	JUL	AUG	SEP	OCT	NOV	DEC	TOTAL
1	O P D	7494	7277	8230	8549	8456	9327	10485	9565	8577	8198	7925	8326	1,02 409
2	IN-PATIENT	2469	2442	2564	2966	3043	2767	2809	2852	2697	2591	2562	2571	32,333
3	DEATH	84	109	123	127	95	121	136	109	119	101	106	97	1,327
4	DISCHARGE	2263	2309	2723	2663	2800	2586	2580	2581	2509	2,540	2428	2442	30,424
5	Sanctioned Beds	536	536	536	536	536	536	536	536	536	536	536	536	536
6	Beds as per MCI norms	394	394	394	394	394	394	394	394	394	394	394	394	394
7	Service Beds	142	142	142	142	142	142	142	142	142	142	142	142	142
8	Bed Occupancy rate	100%	100%	100%	100%	100%	100%	100%	100%	100%	100%	100%	100%	100%
9	Major Operation	109	94	87	123	156	115	115	110	88	77	105	91	1296
10	Minor Operation	160	113	98	57	146	131	97	118	116	98	137	76	1347
11	Normal delivery	906	910	1119	1054	998	963	952	1065	959	998	980	982	11,886
12	Caesarian	339	278	346	344	337	351	378	349	324	338	318	327	4,049

VANIVILAS HOSPITAL STATISTICS FOR THE YEAR OF 2013

SL NO	Particulars	JAN	FEB	MAR	APR	MAY	JUN	JUL	AUG	SEP	OCT	NOV	DEC	TOTAL
1	O P D	8,076	9 [illegible]	11,325	11,424	11,447	10,912	13,252	12,883	11,917	11,515			
2	IN-PATIENT	2423	[illegible]06	2539	2737	2730	2802	3080	3211	3026	3024			
3	DEATH	81	86	89	82	80	83	81	88	98	114			
4	DISCHARGE	2173	2249	2013	2368	2502	2460	2726	3142	2775	2794			
5	Sanctioned Beds	536	536	536	536	536	536	536	536	536	536			
6	Beds as per MCI norms	404	404	404	404	404	404	404	404	404	404			
7	Service Beds	132	132	132	132	132	132	132	132	132	132			
8	Bed Occupancy rate	86%	9 [illegible]	96%	100%	96%	100%	100%	100%	100%	100%			
9	Major Operation	82	110	100	95	104	96	115	112	94	125			
10	Minor Operation	113	145	121	105	124	100	118	91	112	205			
11	Normal delivery	925	8[illegible]0	1042	1039	1072	1074	802	1132	1158	1207			
12	Caesarian	300	285	351	334	386	347	387	421	395	396			

ಅನುಬಂಧ–2

Department : OT as on 25/10/2013		
Sl. No.	Item Description	Placed in
1	**Multipara Monitors**	
	Phillips-1 No	Children OT
	Phillips-3 No's	Emergency OT
	EDAN 2 No's	Major O.T
	BENEVIEW T8 2 No's	Major O.T
2	**Anaesthesia Work Station**	
	Draegar Fabius Plus	Emergency OT
	Draegar Fabius Plus	Major O T
	Draegar Fabius Plus	Children O T
	GE Avance 2 No's	Children O T & Major O T
3	**Infusion pumps**	Children O T & Major O T
	B Braun 4 No's	
4	**Defibrillator**	Emergency O.T & Major O T
	Zollm Series 2 No's	
5	**Cautery Machine**	Septic O T, Emergency OT & Major O T
	Technomed 4 No's	
	L&T 1 No	Major O T
	Erbe 1 NO	Children O.T
	Jehangir	Laparoscopic O T.
6	**Operating Laparosocpe**	Septic O T, Emergency O T & Major O.T
	Karl Storz 3 No's	
	Promis	Children O.T
	Frontline electro	Major O T
7	**Boyles Apparatus 3 No's**	
8	**Autoclave**	PPC O,T Septic O T, Emergency O T Minor O T
	Big	
	Small	

9	**Harmonic Scalpel**	Major O T.
	J & J	
9	**Recestoscope**	Major O T
	Karl Storz 1 NO	
10	**Calposcope**	Minor O T.
	BPL 1 No	
11	**Pulse Oxymeter**	3 in PPC OT, 1 in Minor O T 1 Children O T
	Masimo 5 No's	
12	**Vessel Sealing**	Major O T
	Erbe 1 No	
13	**Remote Control OT Table**	Major O.T.
	Confident Dental Equipments	
14	**Hysteroscopy set**	Major O T
	Karl Storz	
15	**Portable Shadowless Light**	PPC O T, Mionr O T & Septic O.T
	Yesdi Biomed	
16	**Phillips O.T. Lights**	EC Labour ward 4 No's
	Phililux Standard 6 No's	SR Labours Ward 1 No
	S50 & S70 5 No's	Septic O T. 1 No

ಅನುಬಂಧ–3

1. **ಜನನಿ ಶಿಶು ಸುರಕ್ಷಾ ಯೋಜನೆ:**

ಈ ಯೋಜನೆಯಲ್ಲಿ ಗರ್ಭಿಣಿಯಾದಾಗಿನಿಂದ ಮಗುವಿಗೆ ಜನ್ಮ ನೀಡುವ ತನಕ ಹಾಗೂ ಒಂದು ತಿಂಗಳ ಒಳಗಿನ ಮಗುವಿಗೆ ಎಲ್ಲಾ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುವುದು.

2. **ಯಶಸ್ವಿನಿ ಯೋಜನೆ:**

ಗರ್ಭಕೋಶಕ್ಕೆ ಸಂಬಂಧಿಸಿದ ರೋಗಿಗಳಿಗೆ ಮತ್ತು ಮಕ್ಕಳ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡಲಾಗುವುದು.

3. **ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ:**

ಗರ್ಭಕೋಶಕ್ಕೆ ಸಂಬಂಧಿಸಿದ ರೋಗಿಗಳಿಗೆ ಮತ್ತು ಮಕ್ಕಳ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡಲಾಗುವುದು, ಹಾಗೂ ಶಿಶು ವೈದ್ಯ ಶಾಸ್ತ್ರ ವಿಭಾಗದ ಶಿಶುಗಳಿಗೂ ಉಚಿತ ಚಿಕಿತ್ಸೆ ನೀಡಲಾಗುವುದು.

4. **ಬಾಲ ಸಂಜೀವಿನಿ ಯೋಜನೆ:**

1 ರಿಂದ 5 ವರ್ಷದ ಒಳಗೆ ದಾಖಲಾಗುವ ಮಕ್ಕಳಿಗೆ ಉಚಿತ ಚಿಕಿತ್ಸೆ ನೀಡಲಾಗುವುದು (ಅಂಗನವಾಡಿಯಿಂದ ರೆಫರ್‌ಲ್ ಕಾರ್ಡ್‌ನೊಂದಿಗೆ ಬರುವಂತವರಿಗೆ ಹಾಗೂ ಚಿಕಿತ್ಸೆಯ ಗರಿಷ್ಟ ಮೊತ್ತ ₹ 30,000/– ಮಾತ್ರ)

5. **ಸುವರ್ಣ ಆರೋಗ್ಯ ಚೈತನ್ಯ:**

ಈ ಯೋಜನೆಯು ಯಶಸ್ವಿನಿ ಯೋಜನೆಯಡಿಯಲ್ಲಿ ಬರುವುದಾಗಿದ್ದು, ಶಾಲಾ ಮಕ್ಕಳು ತುರ್ತು ಚಿಕಿತ್ಸೆಯ ಸಂದರ್ಭದಲ್ಲಿ ಶಾಲೆಯಿಂದ ಶಿಫಾರಸ್ಸಾಗಿ ಬರುವ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು.

6. ವಾಜಪೇಯಿ ಆರೋಗ್ಯ ಶ್ರೀ:

ಬಿ.ಪಿಎಲ್. ಕಾರ್ಡ್ ಹೊಂದಿರುವ ಕುಟುಂಬದ ಮಕ್ಕಳ ಶಸ್ತ್ರ ಚಿಕಿತ್ಸೆಯನ್ನು ಉಚಿತವಾಗಿ ಮಾಡಲಾಗುವುದು. (ಈ ಯೋಜನೆಯಡಿಯಲ್ಲಿ ಬರುವ ಶಸ್ತ್ರ ಚಿಕಿತ್ಸೆಗಳಿಗೆ ಮಾತ್ರ ಅನ್ವಯವಾಗುತ್ತದೆ.)

7. ಎಸ್.ಸಿ.ಪಿ/ಟಿ.ಎಸ್.ಪಿ. ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೋಗಿಗಳಿಗೆ ಉಚಿತ ಚಿಕಿತ್ಸೆಯನ್ನು ನೀಡಲಾಗುವುದು.

ಬಿ.ಪಿ.ಎಲ್. ಕಾರ್ಡ್‌ದಾರರಿಗೆ ಸಕ್ಕರೆ ವಿತರಿಸುವುದು

487(303); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಔಟ್)

ಅ) ರಾಜ್ಯದಲ್ಲಿರುವ ಬಿಪಿಎಲ್ ಕುಟುಂಬಗಳ ಸಂಖ್ಯೆ ಎಷ್ಟು;

ಆ) ಹೊಸದಾಗಿ ಬಿಪಿಎಲ್ ಕಾರ್ಡಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು;

ಇ) ಈ ಅರ್ಜಿದಾರರಿಗೆ ಯಾವಾಗ ಬಿಪಿಎಲ್ ಕಾರ್ಡುಗಳನ್ನು ವಿತರಿಸಲಾಗುವದು;

ಈ) ಬಿಪಿಎಲ್ ಕಾರ್ಡುದಾರರಿಗೆ ಸರ್ಕಾರ ನೀಡುತ್ತಿರುವ ಆಹಾರಧಾನ್ಯದ ವಿವರ ನೀಡಲಾಗುವುದು;

ಉ) ಈ ಬಿಪಿಎಲ್ ಕಾರ್ಡುದಾರರಿಗೆ ಕಡಿಮೆ ದರದಲ್ಲಿ ಸಕ್ಕರೆ ವಿತರಿಸಲು ಸರ್ಕಾರ ನಿರ್ಧರಿಸಿದೆಯೇ;

ಊ) ಹಾಗಿದ್ದಲ್ಲಿ, ಎಷ್ಟು ಕೆ.ಜಿ. ಮತ್ತು ಯಾವ ದರದಲ್ಲಿ ಈ ಬಿಪಿಎಲ್ ಕಾರ್ಡುದಾರರಿಗೆ ವಿತರಿಸಲಾಗುವುದು;

ಋ) ಇದರ ಜೊತೆಗೆ ಬೆಲ್ಲವನ್ನು ವಿತರಿಸಲು ಸರ್ಕಾರ ಉದ್ದೇಶಿಸಿದೆಯೇ;